ಮಾಡಿದ್ದಾನೆ ಎಂದು ಕೇಳಿದರೆ, ಅದಕ್ಕೆ ಜನ ಹೇಳುತ್ತಾರೆ, ಯಾರೋ ಒಬ್ಬ ಭವಿಷ್ಯ ಹೇಳಿದ್ದಾನಂತೆ, ಏನೆಂದರೆ ರಾಜಕುಮಾರಿ ಓರ್ವ ಸಾಮಾನ್ಯ ಸೈನಿಕನನ್ನು ಮದುವೆಯಾಗುತ್ತಾಳೆ ಎಂದು. ಆದರೆ, ರಾಜನಿಗೆ ಅದು ಇಷ್ಟವಿಲ್ಲ, ಆದ್ದರಿಂದ ರಾಜಕುಮಾರಿಯನ್ನು ಯಾರೂ ನೋಡದಂತೆ ಇಷ್ಟೆಲ್ಲಾ ನಿರ್ಬಂಧದಲ್ಲಿ ಇಟ್ಟಿದ್ದಾನೆ. ಆದರೆ ರಾಜಕುಮಾರಿಯನ್ನು ಒಂದೊಮ್ಮೆ ನೋಡಬೇಕೆಂಬ ಆಸೆ ಸೈನಿಕನಿಗೆ, ಆದರೆ ಸಾಧ್ಯವಿಲ್ಲವೆಂಬ ನಿರಾಸೆ, ಏನಾದರೇನು? ಅವನಲ್ಲಿ ಅವನು ತಂದ ಬಂಗಾರವಿದೆ ಅದರಿಂದ ಪಡೆದ ವಿಪುಲವಾದ ಹಣದಿಂದ ಅವನು ಆನಂದದಿಂದ ಇದ್ದ. ಅವನು ತನಗಿಷ್ಟವಾದ ಜಾಗಕ್ಕೆ ಹೋಗುತ್ತಿದ್ದ, ರಾಜ ಉದ್ಯಾನವನಗಳಿಗೆ ಹೋಗುತ್ತಿದ್ದ, ಬಡವರಿಗೆ ಸಾಕಷ್ಟು ಹಣವನ್ನು ದಾನವಾಗಿ ನೀಡುತ್ತಿದ್ದ. ಅವನಿಗೆ ತಾನು ಬಡತನದಲ್ಲಿ ಹಣವಿಲ್ಲದೆ ಕಳೆದ ದಿನಗಳ ನೆನಪು ಬರುತ್ತಿತ್ತು. ಬಡವರ ಬವಣೆ ಅರ್ಥವಾಗುತ್ತಿತ್ತು ಹಾಗಾಗಿ ಅಂಥವರಿಗೆ ಹೆಚ್ಚಿಗೆ ದಾನಗಳನ್ನು ಕೊಡುತ್ತಿದ್ದನು.

ಈಗ ಸೈನಿಕ ಓರ್ವ ಶ್ರೀಮಂತನಾಗಿದ್ದ, ಒಳ್ಳೊಳ್ಳೆ ದಿರಿಸುಗಳನ್ನು ಧರಿಸಿಕೊಂಡು ರಾಜ ಬೀದಿಗಳಲ್ಲಿ ಓಡಾಡುತ್ತಿದ್ದ. ಜನರು ಅವನನ್ನು ಶ್ರೀಮಂತನೆಂದು ಗುರುತಿಸಿ ಸ್ನೇಹ ಮಾಡಿಕೊಂಡರು. ಅದು ಸೈನಿಕನ ಮನಸ್ಸಿಗೆ ಮುದ ನೀಡುತ್ತಿತ್ತು. ಸಂತೋಷಕೊಡುತ್ತಿತ್ತು. ಅವನು ತನ್ನ ಸ್ನೇಹಿತರಿಗಾಗಿ ತನ್ನಲ್ಲಿ ಇರುವ ಹಣವನ್ನು ಖರ್ಚುಮಾಡತ್ತಲೇ ಹೋದ. ಆದರೆ ಹಣ ಗಳಿಸಲಿಲ್ಲ. ಹಾಗಾಗಿ ಅವನಲ್ಲಿ ಇರುವ ಹಣವೆಲ್ಲ ಖರ್ಚಾಗಿ ಹೋಯಿತು. ಅವನು ಹಣವಿಲ್ಲದೆ ತಾನು ವಾಸವಾಗಿದ್ದ, ಸುಂದರವಾಗಿದ್ದ ಮನೆಯನ್ನು ಖಾಲಿ ಮಾಡಿ, ಒಂದು ಹಳೇ ಮನೆಯ ಮೆಟ್ಟಿಲ ತುತ್ತತುದಿಯಲ್ಲಿ ಇರುವ ಒಂದು ಸಣ್ಣ ಹಳೇ ಕೋಣೆಗೆ ವಾಸಕ್ಕೆ ಬರಬೇಕಾಯಿತು. ಈಗ ಅವನನ್ನು ನೋಡಲು ಯಾರೂ ಸ್ನೇಹಿತರು ಬರುತ್ತಿರಲಿಲ್ಲ. ಏಕೆಂದರೆ ಅಷ್ಟೊಂದು ಮೆಟ್ಟಿಲು ಹತ್ತಿ ಅವರು ಬರಬೇಕಾಗಿತ್ತು. ಅಲ್ಲದೇ ಅವನು ಅವರಿಗಾಗಿ ಹಣ ಖರ್ಚುಮಾಡುವ ಸ್ಥಿತಿಯಲ್ಲಿ ಇರಲಿಲ್ಲ.

ಒಂದು ಕತ್ತಲೆಯ ಸಂಜೆ ಸೈನಿಕ ತನ್ನ ಕೋಣೆಯಲ್ಲಿ ಕುಳಿತಿರುವಾಗ ಅವನಲ್ಲಿ ಒಂದು ಮೊಂಬತ್ತಿ ಕೊಂಡುಕೊಳ್ಳಲೂ ಸಹ ಹಣವಿರಲಿಲ್ಲ. ಆಗ, ಅವನಿಗೆ ನೆನಪಾಯಿತು, ತನ್ನಲ್ಲಿ ಇರುವ ಒಂದು ಡಬ್ಬದಲ್ಲಿ ಈ ಹಿಂದೆ ತನ್ನನ್ನು ಮಾಯಾವಿನಿ ಮರದ ಪೊಟರೆಯಿಂದ ಕೆಳಗೆ ಕಳುಹಿಸಿದಾಗ ಅದರಲ್ಲಿ ಒಂದು ಮೇಣದ ಬತ್ತಿಯನ್ನು ನೋಡಿದ ನೆನಪಾಗಿ ಅದನ್ನು ತೆಗೆಯಬೇಕೆಂದು ಅದರಹತ್ತಿರ ಹೋಗಿ ಅದನ್ನು ಮುಟ್ಟಿದ ತಕ್ಷಣ ಅದರಿಂದ ಒಂದು ಬೆಂಕಿಯ ಕಿಡಿ ಹೊರಟು ಪೆಟ್ಟಿಗೆಯ ಬಾಯಿ ತೆರೆದುಕೊಂಡಿತು. ಅದರಿಂದ ಮರದ ಪೊಟರೆ ಒಳಗೆ ನೋಡಿದಂತಹದೆ ಒಂದು ನಾಯಿ. ಅದರ ಕಣ್ಣುಗಳು ಒಂದು ಫುಟ್‌ಬಾಲ್‌ನಷ್ಟು ಗೋಲಾಗಿರುವಷ್ಟು ದೊಡ್ಡದಿರುವುದು ನಿಂತುಕೊಂಡಿತು. ಹಾಗೂ ಹೇಳಿತು: 'ಏನು ಅಪ್ಪಣೆ ನನ್ನ ದೊರೆಯೇ?' ಎಂದಿತು ನಾಯಿ!! 'ಏನಿದು?' ಪ್ರಶ್ನಿಸಿದ ಸೈನಿಕ!! 'ನಾನು ಕೇಳಿದ್ದನ್ನು ತಂದುಕೊಡುವ ಮಾಂತ್ರಿಕ ಪೆಟ್ಟಿಗೆಯನ್ನು ನಾನು ಹೊಂದಿರುವೆನೆ? ಒಳ್ಳೆಯದು, ನನಗೆ ತಕ್ಷಣ ಹಣ ಬೇಕು ತಂದುಕೊಡು' ಎಂದು ಆಜ್ಞಾಪಿಸಿದ. 'ಅಪ್ಪಣೆ' ಎಂದ ನಾಯಿ ಒಂದು ಕ್ಷಣದಲ್ಲಿ ಮಾಯವಾಗಿ ಇನ್ನೊಂದೇ ಕ್ಷಣದಲ್ಲಿ ಒಂದು ಚೀಲ ತಾಮ್ರದ ನಾಣ್ಯಗಳನ್ನು ಅದರ ಬಾಯಿಯಲ್ಲಿ ಇಟ್ಟುಕೊಂಡು ಬಂದು ಸೈನಿಕನಿಗೆ ಕೊಟ್ಟು, ಪುನಃ ಪೆಟ್ಟಿಗೆಯಲ್ಲಿ ಮಾಯವಾಯಿತು.